**OS-40/2023**
**PW-1**

**ದಿನಾಂಕಃ 04.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎಂ ಎನ್ ವಕೀಲರಿಂದಃ**

ನನ್ನ ತಂದೆಯ ಹೆಸರು ನಂಜೇಗೌಡ. ನನ್ನ ತಾಯಿಯ ಹೆಸರು ಮರಮ್ಮ. ನಮ್ಮ ತಂದೆ ತಾಯಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ದಿನಾಂಕ 24.06.2013 ರಂದು ನಂಜುಂಡೇಗೌಡರವರು ನನ್ನ ತಾಯಿ ಮರಮ್ಮರವರಿಗೆ ದಾನ ಪತ್ರವನ್ನು ಬರೆದಿರುತ್ತಾರೆ. ಸದರಿ ನಂಜುಂಡೇಗೌಡರವರು ನನ್ನ ತಾಯಿ ಮರಮ್ಮರವರಿಗೆ ಮಗ ಆಗಬೇಕು. ಸದರಿ ನಂಜುಂಡೇಗೌಡರವರಿಗೆ ಸದರಿ ದಿನಾಂಕ 24.06.2013 ರ ದಾನ ಪತ್ರದಲ್ಲಿ ನಮೂದಿಸಿರುವ ಆಸ್ತಿಯು ಅವರ ತಂದೆ ನಂಜೇಗೌಡರವರಿಂದ ಬಂದಿರುತ್ತದೆ. ಸದರಿ ನಂಜೇಗೌಡರವರಿಂದ ನಂಜುಂಡೇಗೌಡರವರಿಗೆ ಸದರಿ ದಾನ ಪತ್ರದ ಆಸ್ತಿಯು ಯಾವ ದಾಖಲಾತಿಯ ಮೂಲಕ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾನ ಪತ್ರದ ಆಸ್ತಿಯನ್ನು ನಂಜೇಗೌಡರವರು ಕ್ರಯ ಪತ್ರದ ಮೂಲಕ ಖರೀದಿಸಿದ್ದರು. ಸದರಿ ದಾನ ಪತ್ರದ ಆಸ್ತಿಯು ಸದರಿ ನಂಜೇಗೌಡರವರಿಗೆ ಕ್ರಯ ಪತ್ರದ ಮೂಲಕ ಬಂದಿತು ಎಂದು ಹೇಳಲಾದ ಕ್ರಯ ಪತ್ರವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾನ ಪತ್ರದ ಆಸ್ತಿಯ ಮೇಲೆ ನಂಜೇಗೌಡರವರಿಗಾಗಲೀ, ನಂಜುಂಡೇಗೌಡರವರಿಗಾಗಲೀ ಮತ್ತು ನನ್ನ ತಾಯಿ ಮರಮ್ಮರವರಿಗಾಗಲೀ ಯಾವುದೇ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಗಳಿಗೆ ದಾವಾ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದೇ ಇರುವುದರಿಂದ ನನ್ನ ತಾಯಿಯು ನನ್ನ ಹೆಸರಿಗೆ ದಿನಾಂಕ 16.06.2014 ರ ದಾನ ಪತ್ರವನ್ನು ಬರೆಯುವ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ದಿನಾಂಕ 24.06.2013 ಮತ್ತು ದಿನಾಂಕ 16.06.2014 ರ ದಾನ ಪತ್ರಗಳಲ್ಲಿ ದಾವಾ ಅನುಸೂಚಿ ಸ್ವತ್ತಿನಲ್ಲಿ ನಮೂದಿಸಿರುವ ದಾವಾ ಅನುಸೂಚಿ ಸ್ವತ್ತಿನ ಸರ್ವೆ ನಂ.315/6 ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ನಾನು ಸ್ವಾಧೀನತೆ ಹೊಂದಿಲ್ಲ ಎಂದರೆ ಸರಿಯಲ್ಲ.

ನಂಜೇಗೌಡರವರು ಕೊಂಡೇಗೌಡರವರಿಗೆ ಸರ್ವೆ ನಂ.315/5 ರಲ್ಲಿ 1 ಎಕರೆ 13 ಗುಂಟೆ ಜಮೀನನ್ನು ದಿನಾಂಕ 24.11.1947 ರ ನೊಂದಾಯಿತ ಭೋಗ್ಯ ಪತ್ರದ ಮೂಲಕ ಭೋಗ್ಯ

ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ನಂಜೇಗೌಡ ಮತ್ತು ಅವರ ಕುಟುಂಬದವರು ಸದರಿ ಸರ್ವೆ ನಂ.315/5 ರಲ್ಲಿ 1 ಎಕರೆ 13 ಗುಂಟೆ ಜಮೀನನ್ನು ಕೊಂಡೇಗೌಡರವರಿಗೆ ದಿನಾಂಕ 18.01.1949 ರ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದರಾರೆ ಎಂದರೆ ನನಗೆ ಗೊತ್ತಿಲ್ಲ. ಕೊಂಡೇಗೌಡರವರು ಸರ್ವೆ ನಂ. 315/2 ರಲ್ಲಿ 27 ಗುಂಟೆ ಜಮೀನನ್ನು ದಿನಾಂಕ 10.02.1944 ರ ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೊಂಡೇಗೌಡರವರ ಮಗಳ ಹೆಸರು ಬಸಮ್ಮ ಎಂದರೆ ನನಗೆ ಗೊತ್ತಿಲ್ಲ. ಕೊಂಡೇಗೌಡರವರು ಸರ್ವೆ ನಂ. 315/3 ರಲ್ಲಿ 26 ಗುಂಟೆ ಜಮೀನನ್ನು ದಿನಾಂಕ 17.04.1968 ರ ಕ್ರಯ ಪತ್ರದ ಮೂಲಕ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.315/2 ರಲ್ಲಿ 27 ಗುಂಟೆ, ಸರ್ವೆ ನಂ.315/3 ರಲ್ಲಿ 26 ಗುಂಟೆ, ಸರ್ವೆ ನಂ.315/5 ರಲ್ಲಿ 1 ಎಕರೆ 13 ಗುಂಟೆ ಒಟ್ಟು ಸದರಿ ಸರ್ವೆ ನಂಬರ್ ಗಳಲ್ಲಿ 2 ಎಕರೆ 26 ಗುಂಟೆ ಜಮೀನು ಕೊಂಡೇಗೌಡರವರ ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ.

ಬಸಮ್ಮರವರ ಗಂಡನ ಹೆಸರು ರಾಮಯ್ಯ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಪ್ರತಿವಾದಿಗಳು ನನಗೆ ಗೊತ್ತಿರುತ್ತಾರೆ. ಪ್ರತಿವಾದಿಗಳ ತಂದೆಯ ಹೆಸರು ರಾಮಯ್ಯ ಎಂದರೆ ಸರಿ. ಪುಟ್ಟ ಸಿದ್ದಮ್ಮ, ಜಯಮ್ಮ, ಆರ್ ಮಹದೇವರವರು ಪ್ರತಿವಾದಿಗಳ ಸಹೋದರ ಮತ್ತು ಸಹೋದರಿಯರು ಎಂದರೆ ನನಗೆ ಗೊತ್ತಿಲ್ಲ. ಕೊಂಡೇಗೌಡರವರು ಸರ್ವೆ ನಂ.315/2, ಸರ್ವೆ ನಂ.315/5 ರಲ್ಲಿ 2 ಎಕರೆ ಜಮೀನನ್ನು ತನ್ನ ಮಗಳಾದ ಬಸಮ್ಮರವರಿಗೆ ದಿನಾಂಕ 20.08.1959 ರ ದಾನ ಪತ್ರದ ಮೂಲಕ ವರ್ಗಾಯಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.315 ರಲ್ಲಿ ಎಷ್ಟು ಪೋಡುಗಳಿವೆ ಎಂದು ನನಗೆ ಗೊತ್ತಿಲ್ಲ.

ದಿನಾಂಕ 29.09.2003 ರ ನೊಂದಾಯಿತ ವಿಭಾಗ ಪತ್ರದ ಮೂಲಕ ಸರ್ವೆ ನಂ.315/2 ರಲ್ಲಿ 17 ಗುಂಟೆ ಜಮೀನು ಮತ್ತು ಸರ್ವೆ ನಂ.315/3 ರಲ್ಲಿ 26 ಗುಂಟೆ ಜಮೀನು 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.315 ರ ಜಮೀನುಗಳಿಗೆ ಆಗಿರುವ ದಾಖಲಾತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ಅದೇ ರೀತಿ ದಿನಾಂಕ 29.09.2003 ರ ನೊಂದಾಯಿತ ವಿಭಾಗ ಪತ್ರದ ಮೂಲಕ ಸರ್ವೆ ನಂ.315/2 ರಲ್ಲಿ 10 ಗುಂಟೆ ಜಮೀನು ಮತ್ತು ಸರ್ವೆ ನಂ.315/5 ರಲ್ಲಿ 33 ಗುಂಟೆ ಜಮೀನು 2 ನೇ ಪ್ರತಿವಾದಿಯ ಭಾಗಕ್ಕೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 23.11.2011 ರಂದು 1 ನೇ ಪ್ರತಿವಾದಿಯ ತಾಯಿ

ಬಸಮ್ಮರವರು ಸರ್ವೆ ನಂ.315/5 ರಲ್ಲಿ 20 ಗುಂಟೆ ಜಮೀನನ್ನು ನೊಂದಾಯಿತ ದಾನ ಪತ್ರದ ಮೂಲಕ 1 ನೇ ಪ್ರತಿವಾದಿಗೆ ವರ್ಗಾಯಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2019 ರಲ್ಲಿ ಮೈಸೂರಿನ ಭೂ ದಾಖಲೆಗಳ ಕಛೇರಿಯಲ್ಲಿ ಸರ್ವೆ ನಂ.315 ರ ಪೋಡಿ ದುರಸ್ಥಿಯಾಗಿರುವುದು ಸರಿಯಿಲ್ಲ ಎಂದು ಒಂದು ಪ್ರಕರಣ ನಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಸರ್ವೆ ನಂ.315, 315/1 ರಿಂದ 315/7 ರವರೆಗಿನ ಪೋಡಿ ದುರಸ್ಥಿಯ ಬಗ್ಗೆ ಪ್ರಕರಣ ನಡೆದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಮೈಸೂರಿನ ಭೂ ದಾಖಲೆಗಳ ಅಧಿಕಾರಿಗಳು ಸರ್ವೆ ನಂ.315, 315/1 ರಿಂದ 315/7 ರವರೆಗಿನ ಪೋಡಿಗಳು ಸರಿಯಿಲ್ಲ ಎಂದು ಆದೇಶಿಸಿ ಸದರಿ ಪೋಡಿಗಳನ್ನು ಮರು ಪರಶೀಲಿಸುವಂತೆ ತಹಸೀಲ್ದಾರ್, ಟಿ.ನರಸೀಪುರ ರವರಿಗೆ ನಿರ್ದೇಶನ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೈಸೂರಿನ ಭೂ ದಾಖಲೆಗಳ ಕಛೇರಿಯಲ್ಲಿ ನಾನು ಒಂದು ಅರ್ಜಿಯನ್ನು ಸಲ್ಲಿಸಿ ಸರ್ವೆ ನಂ. 315/ 6 ರ ಪೋಡು ತಪ್ಪಾಗಿದೆ ಎಂದು ತಿಳಿಸಿದ್ದೆನು ಎಂದರೆ ಸರಿಯಲ್ಲ. ನಂತರ ತಹಸೀಲ್ದಾರ್, ಟಿ.ನರಸೀಪುರ ರವರು ಸರ್ವೆ ನಂ.315 ರ ಜಮೀನಿಗೆ ಭೇಟಿ ನೀಡಿ ಅಳತೆ ಮಾಡಿದ್ದಾರೆ ಎಂದರೆ ಸರಿಯಿಲ್ಲ. ಸದರಿ ತಹಸೀಲ್ದಾರ್, ಟಿ.ನರಸೀಪುರ ರವರು ಸ್ಥಳಕ್ಕೆ ಬಂದು ಅಳತೆ ಮಾಡಿ ಪೋಡಿ ದುರಸ್ಥಿ ಮಾಡಿ ಸರ್ವೆ ನಂ.315/1 ರಲ್ಲಿ ಎಸ್ ಮಾದ ನಾಯಕರವರ ಹೆಸರಿನಲ್ಲಿ 23 ಗುಂಟೆ, ಮಹದೇವರವರ ಹೆಸರಿನಲ್ಲಿ 23 ಗುಂಟೆ, ನನ್ನ ಹೆಸರಿನಲ್ಲಿ 30 ಗುಂಟೆ, ಸರ್ವೆ ನಂ. 315/2 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ 17 ಗುಂಟೆ, ಸರ್ವೆ ನಂ. 315/3 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ 26 ಗುಂಟೆ, ಸರ್ವೆ ನಂ. 315/4 ರಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ 10 ಗುಂಟೆ, ಸರ್ವೆ ನಂ. 315/5 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ 20 ಗುಂಟೆ, ಸರ್ವೆ ನಂ. 315/6 ರಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ 33 ಗುಂಟೆ ಜಮೀನನ್ನು ಹೊಸದಾಗಿ ಪೋಡಿ ದುರಸ್ಥಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.315 ರಲ್ಲಿ ಎಷ್ಟು ಪೋಡುಗಳಿವೆ ಮತ್ತು ಯಾವ ಯಾವ ಪೋಡುಗಳಲ್ಲಿ ಯಾರ ಯಾರ ಹೆಸರಿಗೆ ಎಷ್ಟು ಜಮೀನು ದಾಖಲಾಗಿದೆ ಎಂದು ನಾನು ಓದಿಸಿ ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.315/2 ರಿಂದ 315/6 ರ ಜಮೀನುಗಳಲ್ಲಿ ಪ್ರತಿವಾದಿಗಳು ಬಡಾವಣೆ ನಿರ್ಮಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.315 ರಲ್ಲಿ ಒಟ್ಟು ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೆ ನಂ.315 ರ ಯಾವ ಯಾವ ಪೋಡುಗಳಲ್ಲಿ ಎಷ್ಟು ಜಮೀನು ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ ಚೆಕ್ಕುಬಂಧಿಯನ್ನು ನನಗೆ ಹೇಳಲು ಆಗುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನನಗಾಗಲೀ, ನನ್ನ ತಾಯಿಗಾಗಲೀ ಅಥವಾ ನನ್ನ ತಂದೆಗಾಗಲೀ

ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮಗೆ ಸೇರಿದ ಜಮೀನಿನಲ್ಲಿ ಬಡಾವಣೆ ನಿರ್ಮಿಸುತ್ತಿರುವುದರಿಂದ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಈಗ ಮಾರುಕಟ್ಟೆ ಬೆಲೆ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಹೇಳಲು ಬರುವುದಿಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ